ತಂತ್ರಜ್ಞಾನ

# ಗ್ಯಾಜೆಟ್‌ಗಳ ಆಪದ್ಬಾಂಧವ
# ಚಾರ್ಜಿಂಗ್ ರೂಂ!



**ಇಡೀ ಕೋಣೆಯೇ ವೈರ್‌ಲೆಸ್ ಚಾರ್ಜರ್‌ನಂತೆ ಕೆಲಸ ಮಾಡುತ್ತದೆ. ಮೊಬೈಲು, ಲ್ಯಾಪ್‌ಟಾಪ್, ಪವರ್ ಬ್ಯಾಂಕ್, ಕ್ಯಾಮೆರಾಗಳು ಯಾವುದೇ ಕೇಬಲ್‌ನ ಸಹಾಯವಿಲ್ಲದೆ ರೀಚಾರ್ಜ್ ಆಗುತ್ತವೆ.**

**■ ಗುರುರಾಜ್ ಎಸ್. ದಾವಣಗೆರೆ**

ಬೋರ್ಡ್‌ರೂಂನಲ್ಲಿ ಅತಿಥಿಗಳು ಮತ್ತು ನಿಮ್ಮ ಬಾಸ್ ನೀವು ಪ್ರೆಸೆಂಟೇಶನ್ ಶುರುಮಾಡುವುದನ್ನೇ ಕಾಯುತ್ತಿರುತ್ತಾರೆ. ಎಲ್ಲರಿಗೂ 'ಗ್ರೀಟಿಂಗ್ಸ್ ಆಫ್ ದಿ ಡೇ' ಹೇಳಿ ಲ್ಯಾಪ್‌ಟಾಪ್ ಬಟನ್ ಅದುಮುತ್ತೀರಿ. ಬ್ಯಾಟರಿ ಖಾಲಿ ಆಗಿದೆ ಎಂಬ ಸಂದೇಶ ಸ್ಕ್ರೀನ್‌ನಲ್ಲಿ ಕಾಣಿಸಿಕೊಂಡು, ತಕ್ಷಣವೇ ಲ್ಯಾಪ್‌ಟಾಪ್ ಆಫ್ ಆಗಿಬಿಡುತ್ತದೆ. ಚಾರ್ಜಿಂಗ್ ಯುನಿಟ್‌ಗಾಗಿ ಲ್ಯಾಪ್‌ಟಾಪ್ ಬ್ಯಾಗನ್ನು ತಡಕಾಡುತ್ತೀರಿ. ಅದು ಮನೆಯ ಗೋಡೆಯ ಸಾಕೆಟ್‌ನಲ್ಲೇ ಇರುವುದು ನೆನಪಾಗುತ್ತದೆ. ಪವರ್ ಬ್ಯಾಂಕ್ ಕೂಡ ಇರುವುದಿಲ್ಲ. ನಿಮ್ಮ ಅಸಿಸ್ಟೆಂಟ್ ಕಡೆ ಸಹಾಯಕ್ಕಾಗಿ ಕಣ್ಸನ್ನೆ ಮಾಡುತ್ತೀರಿ. ನಿಮ್ಮ ಲ್ಯಾಪ್‌ಟಾಪ್‌ಗೆ ಹೊಂದುವ ಚಾರ್ಜಿಂಗ್ ಕೇಬಲ್ ಸಹೋದ್ಯೋಗಿಗಳ ಬಳಿ ಇರುವುದಿಲ್ಲ. ಎಸಿ ರೂಂನಲ್ಲೂ ಬೆವರುತ್ತೀರಿ. ಗಂಟಲೊಣಗಿ ಮಾತೇ ನಿಂತುಹೋಗುತ್ತದೆ. ನಿಮ್ಮ ಬಾಸ್ ಕಣ್ಣಲ್ಲೇ ಶೋಕಾಸ್ ನೋಟೀಸ್ ಕಳಿಸುತ್ತಾರೆ. ಅಲ್ಲಿದ್ದ ಎಲ್ಲರಿಗೂ ಭಾರೀ ಇರುಸುಮುರುಸು! ಮೀಟಿಂಗ್ ಕ್ಯಾನ್ಸಲ್ ಆಗುವ ಹಂತಕ್ಕೆ ಬರುತ್ತದೆ.

ಇಂಥ ಇರುಸುಮುರುಸು ಘಟಿಸದಂತೆ ತಡೆಯಲು, ಮೀಟಿಂಗ್‌ಗಳು ನಿರಾತಂಕವಾಗಿ ಮುಂದುವರೆಯುವಂತೆ ಮಾಡಲು ವಿನೂತನ ತಂತ್ರಜ್ಞಾನವೊಂದು ಅಭಿವೃದ್ಧಿಗೊಂಡಿದೆ. ಅದೇ ಚಾರ್ಜಿಂಗ್ ರೂಂ! ಅಂದರೆ, ನಿಮ್ಮ ಮೊಬೈಲು, ಲ್ಯಾಪ್‌ಟಾಪ್, ಪವರ್ ಬ್ಯಾಂಕ್, ಕ್ಯಾಮೆರಾಗಳನ್ನು ಯಾವುದೇ ಕೇಬಲ್‌ನ ಸಹಾಯವಿಲ್ಲದೆ ರೀ ಚಾರ್ಜ್ ಮಾಡುವ ಕೋಣೆ ಅದು. ನಿಮ್ಮ ಹಾಗೂ ಆಫೀಸಿಗೆ ಸಂಬಂಧಿಸಿದ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನು ಆ ಕೋಣೆಯಲ್ಲಿ ತುಸು ಸಮಯ ಇಟ್ಟರೆ ಸಾಕು. ಅವೆಲ್ಲ ತನ್ನಿಂತಾನೇ ಚಾರ್ಜ್ ಆಗಿಬಿಡುತ್ತವೆ. ಅದೂ ರಿಯಲ್ ಟೈಂನಲ್ಲಿ!

## ಏನಿದು ಚಾರ್ಜಿಂಗ್ ರೂಂ?

ಇದೊಂದು ವಿಶಿಷ್ಟ ಕೋಣೆ. ಥಟ್ಟನೆ ನೋಡಿದರೆ ವಿಶಾಲ ಲಿಫ್ಟ್‌ನಂತೆ ಕಾಣಿಸುತ್ತದೆ. ಟೋಕಿಯೊ ವಿಶ್ವವಿದ್ಯಾಲಯದ ಟಕೂಯ ಸಸಾತನಿ ಮತ್ತು ಸಂಗಡಿಗರು ಅಭಿವೃದ್ಧಿಪಡಿಸಿರುವ ಈ ಚಾರ್ಜಿಂಗ್ ರೂಂ, ಈಗ ಮಾರುಕಟ್ಟೆಯಲ್ಲಿ ಬಳಕೆಯಲ್ಲಿರುವ ವೈರ್‌ಲೆಸ್ ಚಾರ್ಜರ್‌ಗಳಂತೆಯೇ ಕೆಲಸ ಮಾಡುತ್ತದೆ. ಅವರು ಮಾಡಿದ್ದಿಷ್ಟೇ. 18 ಘನ ಅಡಿ ಅಳತೆಯ ಕೋಣೆಯೊಂದನ್ನು ನಿರ್ಮಿಸಿ, ಗೋಡೆಗೆ ಅಲ್ಯೂಮಿನಿಯಂ ಪ್ಯಾನೆಲ್‌ಗಳನ್ನು ಜೋಡಿಸಿದರು. ಕೋಣೆಯ ನಡುವೆ ಅಲ್ಯೂಮಿನಿಯಂ ಕಂಬವನ್ನು ನಿಲ್ಲಿಸಿ, ಗೋಡೆಗಳ ಮೂಲಕ ವಿದ್ಯುತ್ ಹರಿಸಲಾಯಿತು. ಕೋಣೆಯಲ್ಲಿ ಹ್ಯಾಂಗಿಂಗ್ ಲೈಟ್, ಕುರ್ಚಿ, ಫ್ಯಾನ್, ಬುಕ್‌ಶೆಲ್ಫ್ ಎಲ್ಲವೂ ಇದ್ದವು. ಗೋಡೆಗಳಲ್ಲಿ ಕರೆಂಟ್ ಹರಿದ ತಕ್ಷಣ ಇಡೀ ಕೋಣೆಯ ಎಲ್ಲ ಭಾಗಗಳಲ್ಲೂ ಮೂರು ಆಯಾಮದ (3D) ಎರಡು ಬಗೆಯ ಅಯಸ್ಕಾಂತ ಕ್ಷೇತ್ರಗಳು ನಿರ್ಮಾಣಗೊಂಡವು. ಒಂದು ಕ್ಷೇತ್ರ ಕೋಣೆಯ ನಡುಭಾಗವನ್ನು ಆವರಿಸಿದರೆ, ಇನ್ನೊಂದು ಕೋಣೆಯ ತಾರಸಿ, ಮೂಲೆಗಳಲ್ಲಿ ಸೃಷ್ಟಿಯಾಗಿತ್ತು. ಸ್ಟಡಿ ಟೇಬಲ್ ಮತ್ತು ಕುರ್ಚಿಯ ಮೇಲೆ ಇಟ್ಟಿದ್ದ ಮೊಬೈಲು, ಪವರ್ ಬ್ಯಾಂಕ್‌ಗಳು ಒಂದು ಗಂಟೆಯ ನಂತರ ಸಂಪೂರ್ಣ ಚಾರ್ಜ್ ಆಗಿದ್ದವು! ಕೋಣೆಯ ತುಂಬ 50 ವ್ಯಾಟ್‌ಗಳ ಶಕ್ತಿ ಸೃಷ್ಟಿಯಾಗಿ ಕಾಯಿಲ್ ಹೊಂದಿದ್ದ ಎಲ್ಲ ಸ್ಮಾರ್ಟ್ ಸಾಧನಗಳೂ ಚಾರ್ಜ್ ಆಗಿದ್ದವು. ಕೋಣೆಯ ಸ್ಮಾರ್ಟ್ ಫ್ಯಾನ್, ಲೈಟ್‌ಗಳೂ ಆನ್ ಆಗಿದ್ದವು. ಉತ್ಪತ್ತಿಯಾದ ಒಟ್ಟು ವಿದ್ಯುತ್‌ನ ಶೇ. 90 ಭಾಗ ಸ್ಮಾರ್ಟ್ ಸಾಧನೆಗಳಿಗೆ ಪೂರೈಕೆಯಾಗಿ ಸ್ವಲ್ಪ ಭಾಗ ಪೋಲಾಗಿತ್ತು.

ವಾಷಿಂಗ್ಟನ್ ಯೂನಿವರ್ಸಿಟಿಯ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರೊಫೆಸರ್ ಜೋಶುವ ಸ್ಮಿತ್ ಟೋಕಿಯೋದ ತಜ್ಞರು ನಿರ್ಮಿಸಿರುವ ಚಾರ್ಜಿಂಗ್ ಕೋಣೆಯ ಬಗ್ಗೆ ಮೆಚ್ಚುಗೆ ಸೂಚಿಸುತ್ತ – 'ಇಡೀ ಕೋಣೆಯೇ ಚಾರ್ಜಿಂಗ್ ಯುನಿಟ್‌ನಂತೆ ಕೆಲಸ ಮಾಡುವುದು ಕ್ರಾಂತಿಕಾರೀ ಅನ್ವೇಷಣೆಗಳಲ್ಲೊಂದು' ಎಂದಿದ್ದಾರೆ. ವೈರ್‌ಲೆಸ್ ವಿಧಾನದಿಂದ ಕಾರುಗಳಲ್ಲಿ, ಆಫೀಸಿನ ಕೆಲವೇ ಜಾಗಗಳಲ್ಲಿ ಒಂದೊಂದೇ ಫೋನ್ ಅನ್ನು ಚಾರ್ಜ್ ಮಾಡುವುದು ಗೊತ್ತೇ ಇದೆ. ಆದರೆ ಕೋಣೆಯ ಯಾವ ಭಾಗದಲ್ಲಿ ಎಷ್ಟೇ ಫೋನ್‌ಗಳಿದ್ದರೂ ಚಾರ್ಜ್ ಆಗತೊಡಗುತ್ತದೆ ಎಂಬುದು ಸಾಮಾನ್ಯ ವಿಷಯವಲ್ಲ.

ಪ್ರಸ್ತುತ ಬಳಕೆಯಲ್ಲಿರುವ ವೈರ್‌ಲೆಸ್

